**ಬೆಂಗಳೂರು ವಿಶ್ವವಿದ್ಯಾಲಯ**

ಸಂಖ್ಯೆ: ಎಸ್‌ವೈಎನ್/ಎಸ್1/171/ಸಾ.ಸ./2023-24

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 18-11-2023

**ಗೆ,**

*ಸಿಂಡಿಕೇಟ್ ಸದಸ್ಯರು,*
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 10-11-2023 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳು.

***

ದಿನಾಂಕ 10-11-2023 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 009, ಇಲ್ಲಿ ಜರುಗಿದ 171ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

18/11/23

**ಕುಲಸಚಿವರು**

ಲಗತ್ತು: ಮೇಲಿನಂತೆ.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/171/ಸಾ.ಸ./2023–24

ಜ್ಞಾನಭಾರತಿ
ಬೆಂಗಳೂರು–560 056
ದಿನಾಂಕ: 17.11.2023

**ದಿನಾಂಕ 10–11–2023 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು–560 009, ಇಲ್ಲಿ ಜರುಗಿದ 171ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.**

**<u>ಹಾಜರಾದ ಸದಸ್ಯರು:</u>**

| | | | |
|---|---|---|---|
| 1. | ಪ್ರೊ. ಡಾ. ಜಯಕರ ಎಸ್ ಎಂ<br>ಕುಲಪತಿಗಳು | – | ಸಭಾಧ್ಯಕ್ಷರು |
| 2. | ಡಾ. ಮಾಲಿನಿ ಕೆ | – | ಸದಸ್ಯರು |
| 3. | ಶ್ರೀ ರವೀಂದ್ರ ಪೈ | – | ಸದಸ್ಯರು |
| 4. | ಪ್ರೊ. ನಾರಾಯಣಸ್ವಾಮಿ ಎಂ | – | ಸದಸ್ಯರು |
| 5. | ಡಾ. ಬಿ.ಎಸ್. ಸುಜಾತ ರಾಥೋಡ್<br>ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | – | ಸದಸ್ಯರು |
| 6. | ಡಾ. ಕಾವ್ಯಶ್ರೀ ಆರ್ | – | ಸದಸ್ಯರು |
| 7. | ಶ್ರೀ ಗುರುಪ್ರಸಾದ್ ಬಿ.ಜಿ. | – | ಸದಸ್ಯರು |
| 8. | ಶ್ರೀ ವಿಶ್ವನಾಥ್ ಜಿ | – | ಸದಸ್ಯರು |
| 9. | ಪ್ರೊ. ಸಿ. ಶ್ರೀನಿವಾಸ್,<br>ಕುಲಸಚಿವರು (ಮೌಲ್ಯಮಾಪನ) | – | ಸದಸ್ಯರು |
| 10. | ಶ್ರೀ ಶೇಕ್ ಲತೀಫ್, ಕೆ.ಎ.ಎಸ್.<br>ಕುಲಸಚಿವರು | – | ಸದಸ್ಯ ಕಾರ್ಯದರ್ಶಿ |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ಸಿಂಡಿಕೇಟ್‌ಗೆ ಸದಸ್ಯರಾಗಿ ನಾಮನಿರ್ದೇಶನಗೊಂಡ ಡಾ. ಕಾವ್ಯಶ್ರೀ ಆರ್, ಶ್ರೀ ಗುರುಪ್ರಸಾದ್ ಬಿ.ಜಿ., ಮತ್ತು ಶ್ರೀ ವಿಶ್ವನಾಥ್ ಜಿ ಅವರುಗಳನ್ನು ಸಭೆಗೆ ಪರಿಚಯಿಸಿ ಅವರುಗಳನ್ನು ಸಹ ಸ್ವಾಗತಿಸಿದರು. ಮುಂದುವರೆದು, ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿದ ಪ್ರೊ. ಸಿ. ತೇಜಸ್ವಿನಿ ಶ್ರೀ ಹರೀಶ್ ನಾಯ್ಕ್ ಡಾ. ಕೆ.ಎ. ಮಹೇಶ್ವರಯ್ಯ ಮತ್ತು ಶ್ರೀಮತಿ ಕ್ಷಮಾ ಕುಲಕರ್ಣಿ ಅವರುಗಳ ಸೇವೆಯನ್ನು ಸ್ಮರಿಸಿ, ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು.

18/11/23

ಕುಲಪತಿಗಳು ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು. ಅವರು ಮುಂದುವರೆದು, ಹಿಂದಿನ ಸಿಂಡಿಕೇಟ್ ಸಭೆಯ ನಂತರ ಇಲ್ಲಿಯವರೆವಿಗೂ ವಿಶ್ವವಿದ್ಯಾಲಯದಲ್ಲಿ ಆಗಿರುವ ಈ ಕೆಳಕಂಡ ವಿಷಯಗಳ ಕುರಿತು ಸಿಂಡಿಕೇಟಿನ ಗಮನಕ್ಕೆ ತಂದರು.

1. 58ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾನ್ಯ ರಾಜ್ಯಪಾಲರು 397ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಸ್ವತಃ ಚಿನ್ನದ ಪದಕ ಹಾಗೂ ಬಹುಮಾನಗಳನ್ನು ವಿತರಿಸಿದರು. ಹಿಂದಿನ ಘಟಿಕೋತ್ಸವಗಳಲ್ಲಿ ಎಲ್ಲರಿಗೂ ಮಾನ್ಯ ರಾಜ್ಯಪಾಲರಿಂದಲೇ ಪದಕ/ಬಹುಮಾನ ವಿತರಣೆ ಕಾರ್ಯ ಆಗಿರಲಿಲ್ಲ. ಇದು ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿದೆ;

2. ನವೆಂಬರ್ 2, 2023ರಂದು ನೀತಿ ಆಯೋಗ, ನವದೆಹಲಿ, ಇವರು ಆಯೋಜಿಸಿದ್ದ ರಾಜ್ಯ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಗೊಳಿಸುವ ವಿಷಯದ ಕುರಿತು ಒಂದು ದಿನದ ಕಾರ್ಯಾಗರ ಸಭೆಯಲ್ಲಿ ಕರ್ನಾಟಕ ರಾಜ್ಯದಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳನ್ನು ಆಹ್ವಾನಿಸಿದ್ದರು. ಸದರಿ ಕಾರ್ಯಾಗರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕೈಗೊಂಡಿರುವ ಪ್ರಗತಿ ಯೋಜನೆಗಳ ಬಗ್ಗೆ ಪ್ರಸ್ತುತಪಡಿಸಲಾಯಿತು. ಬೆಂಗಳೂರು ವಿಶ್ವವಿದ್ಯಾಲಯ ಕೈಗೊಂಡಿರುವ ಸಂಶೋಧನಾ ಅನುದಾನ ಹಾಗೂ ಇತರ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಇತರ ರಾಜ್ಯಗಳ ವಿಶ್ವವಿದ್ಯಾಲಯಗಳು ಇದೇ ಮಾದರಿಯನ್ನು ಅಳವಡಿಸಿಕೊಳ್ಳಬೇಕೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

3. ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶ ಪ್ರಕ್ರಿಯೆಗೆ ಅರ್ಜಿಯನ್ನು ಆಹ್ವಾನಿಸಿದ್ದು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆ ವಿಶ್ವವಿದ್ಯಾಲಯದ ಕುಲಪತಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ವಿಸ್ತರಿಸಲು ಮೌಖಿಕ ಕೋರಿಕೆ ಹಿನ್ನೆಲೆಯಲ್ಲಿ, ದಿನಾಂಕಗಳನ್ನು ವಿಸ್ತರಿಸಲಾಗಿದೆ.

4. ಆಡಳಿತ ಕಛೇರಿಯಲ್ಲಿರುವ ಕುಲಪತಿಗಳು ಹಾಗೂ ಕುಲಸಚಿವರ ಕಛೇರಿಗಳನ್ನು ನವೀಕರಣ ಪ್ರಸ್ತಾವನೆ ಹಿಂದಿನ ಕುಲಪತಿಗಳ ಅವಧಿಯಲ್ಲೇ ಅನುಮೋದನೆಗೊಂಡಿದ್ದು, ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿದ್ದರೂ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಸಮಿತಿ ಭೇಟಿ ಹಾಗೂ ಘಟಿಕೋತ್ಸವ ಕಾರ್ಯ ನಿಮಿತ್ತ ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರಲಿಲ್ಲ. ಪ್ರಸ್ತುತ ನವೀಕರಣ ಕಾಮಗಾರಿ ನಿಮಿತ್ತ ಈ ಎರಡೂ ಕಛೇರಿಗಳನ್ನು ವಿಶ್ವವಿದ್ಯಾಲಯದ ಅತಿಥಿ ಗೃಹಕ್ಕೆ ತಾತ್ಕಾಲಿಕವಾಗಿ ಸ್ಥಳಾಂತರಿಸಲಾಗಿದೆ ಎಂದು ಮೇಲ್ಕಂಡ ವಿಷಯಗಳನ್ನು ಸಿಂಡಿಕೇಟ್ ಗಮನಕ್ಕೆ ತಂದರು.



18/11/23

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 01**: ದಿನಾಂಕ 16.09.2023 ರಂದು ಜರುಗಿದ 170ನೇ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 16.09.2023 ರಂದು ಜರುಗಿದ 170ನೇ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸ್ಥಿರೀಕರಿಸಿತು.

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 02**: ದಿನಾಂಕ 16.09.2023 ರಂದು ಜರುಗಿದ 170ನೇ ಸಿಂಡಿಕೇಟ್ ಸಭೆಯ ನಡಾವಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 16.09.2023 ರಂದು ಜರುಗಿದ 170ನೇ ಸಿಂಡಿಕೇಟ್ ಸಭೆಯ ನಡಾವಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಯನ್ನು (ATR) ಪರಿಗಣಿಸಿ ಅನುಮೋದಿಸಿತು.

*Proceedings of the 171st meeting of the Syndicate held on 10.11.2023*

**Item No.3.** Request for sanction of additional grant to Dr. M. Siddappa, Co-ordinator, Centre for Women's Studies, BUB towards celebration of International Women's day held on 8th March 2023-reg.

The Registrar informed the Syndicate that, as per policy of the University, matching grants of Rs.1.00 lakh and Rs.3.00 lakhs are being extended to the departments / teachers of the University for organizing National and International conferences, respectively. As per the said policy the co-ordinator of the Centre for Women Studies has been sanctioned Rs.1.00 lakh towards celebration of International Women's Day. However, he has requested for sanction of additional grant of Rs.99,500/- incurred by him over and above the sanctioned amount towards conduct of the International Women's Day. Hence the matter is placed before the Syndicate for a decision.

18/11/23

***Resolution:***

The Syndicate resolved not to sanction any additional grant for the above International Women's Day celebration organized by the Centre for Women Studies and directed to send a circular to all the Departments / Teachers to limit the expenditure to the amount sanctioned by the University.

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 04**: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಭೂ–ಮಾಪಕರ ಕರ್ತವ್ಯಗಳನ್ನು ನಿರ್ವಹಿಸಲು "ಪ್ರಥಮ ದರ್ಜೆ ಭೂಮಾಪಕ /ಕನ್ಸಲ್‌ಟೆಂಟ್ ಸರ್ವೆಯರ್" ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವ ಬಗ್ಗೆ.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣವು 1111 ಎಕರೆ ಇದ್ದು, ಹಿಂದೆ ಕಾರ್ಯ ನಿರ್ವಹಿಸುತ್ತಿದ ನಿವೃತ್ತ ಭೂಮಾಪಕರು ಹಾಗೂ ಕನ್ಸಲ್ಟಂತ್ ಸರ್ವೇಯರ್ ಆದ ಶ್ರೀ ವಿಶ್ವನಾಥ್ ಎಚ್, ಅವರು ವಯೋಸಹಜ ಅನಾರೋಗ್ಯ ನಿಮಿತ್ತ ಕರ್ತವ್ಯಕ್ಕೆ ಗೈರು ಹಾಜರಾಗಿರುವ ಕಾರಣ ಅವರ ಜಾಗದಲ್ಲಿ ಶ್ರೀ ಕೃಷ್ಣೆಗೌಡ, ಸಹಾಯಕ ನಿರ್ದೇಶಕರು (ನಿವೃತ್ತ) ಭೂದಾಖಲೆಗಳ ಇಲಾಖೆ, ಇವರ ಸೇವೆಯನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ಮಾಸಿಕ ಕ್ರೋಢೀಕರಣ ವೇತನ ರೂ.35,000/–ಗಳ ಮೇಲೆ ಪಡೆದುಕೊಳ್ಳಲಾಗಿದೆ. ಈ ಹಿಂದೆ ಹಲವು ಬಾರಿ ಒಬ್ಬ ಸರ್ವೇಯರ್ ಅನ್ನು ನಿಯೋಜಿಸಬೇಕೆಂದು ಸರ್ಕಾರಕ್ಕೆ ಕೋರಿದ್ದರೂ ಸರ್ವೇಯರ್‌ಗಳ ಅಭಾವದಿಂದ ಸರ್ಕಾರದಿಂದ ಯಾರನ್ನೂ ನಿಯೋಜಿಸಿರುವುದಿಲ್ಲ. ಇದರಿಂದಾಗಿ ಪತ್ರಿಕೆಗಳಲ್ಲಿ ಪ್ರಕಟಣೆ ಮೂಲಕ ಅರ್ಜಿ ಆಹ್ವಾನಿಸಿ, ಅರ್ಜಿದಾರರಲ್ಲಿ ಒಬ್ಬರ ಸೇವೆಯನ್ನು ಪಡೆದುಕೊಳ್ಳಲಾಗಿದೆ ಎಂದು ಸಿಂಡಿಕೇಟ್ ಗಮನಕ್ಕೆ ತಂದು ಅನುಸಮರ್ಥನೆಯನ್ನು ಕೋರಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಭೂ–ಮಾಪಕರ ಕರ್ತವ್ಯಗಳನ್ನು ನಿರ್ವಹಿಸಲು ವಿಶ್ವವಿದ್ಯಾಲಯದ ಪ್ರಕಟಣೆಯನುಸಾರ ಬಂದ ಅರ್ಜಿದಾರರಲ್ಲಿ, "ಕನ್ಸಲ್‌ಟೆಂಟ್ ಸರ್ವೆಯರ್" ಆಗಿ ಶ್ರೀ ಕೃಷ್ಣೆಗೌಡ ಸಹಾಯಕ ನಿರ್ದೇಶಕರು (ನಿವೃತ್ತ) ಭೂದಾಖಲೆಗಳ ಇಲಾಖೆ, ಇವರ ಸೇವೆಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಡಿ ಮಾಸಿಕ ಕ್ರೋಢೀಕರಣ ವೇತನ ರೂ.35,000/–ಗಳ ಮೇಲೆ ಒಂದು ವರ್ಷದ ಅವಧಿಗೆ ಪಡೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.



18/11/23

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 05**: ಶ್ರೀಮತಿ ಕುಸುಮ್ ರಾಮಚಂದ್ರನ್, ಕಿರಿಯ ಸಹಾಯಕರು, ಮನಃಶಾಸ್ತ್ರ ವಿಭಾಗ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ನೇಮಿಸಲಾಗಿದ್ದ ಅಧ್ಯಕ್ಷರು ತಮ್ಮ ಇಲಾಖಾ ವಿಚಾರಣೆ ಸಮಿತಿಯ ಅಧ್ಯಕ್ಷ ಸ್ಥಾನದಿಂದ ಬಿಡುಗಡೆ ಮಾಡಲು ಕೋರಿರುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀಮತಿ ಕುಸುಮ್ ರಾಮಚಂದ್ರನ್, ಕಿರಿಯ ಸಹಾಯಕರು, ಮನಃಶಾಸ್ತ್ರ ವಿಭಾಗ, ಇವರನ್ನು ರಿಟ್ ಅರ್ಜಿ ಸಂಖ್ಯೆ: 31882/2019ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ: 05-12-2022ರಲ್ಲಿನ ನಿರ್ದೇಶನದಂತೆ ಅನುಕಂಪದ ಆಧಾರದ ಅಡಿಯಲ್ಲಿ ಗ್ರೂಪ್ ಡಿ ಹುದ್ದೆಯಿಂದ ಗ್ರೂಪ್ ಸಿ ಹುದ್ದೆಯಾದ ಕಿರಿಯಸಹಾಯಕ ಹುದ್ದೆಗೆ ಅವರ ನೇಮಕಾತಿ ದಿನಾಂಕದಿಂದ ಪರಿಗಣಿಸಿರುವ ಕ್ರಮವನ್ನು ಹಾಗೂ ಸದರಿಯವರ 966 ದಿನಗಳ ಗೈರು ಹಾಜರಿಯನ್ನು ವಿಶ್ವವಿದ್ಯಾಲಯದ ಆದೇಶ ದಿನಾಂಕ:19-01-2022ರಲ್ಲಿ ವೇತನ ರಹಿತ ರಜೆಯನ್ನು ಮಂಜೂರು ಮಾಡಿದ್ದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿ, ಅವರ ಪರೀಕ್ಷಾ ಪೂರ್ವ ಅವಧಿಯನ್ನು ಸಂಬಂಧಪಟ್ಟ ಮೇಲಾಧಿಕಾರಿಯಿಂದ ವರದಿ ಬಂದನಂತರ ಘೋಷಿಸಲು ಕುಲಪತಿಗಳಿಗೆ ಸಿಂಡಿಕೇಟ್ ಅಧೀಕರಿಸಿತು.

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 06**: ಶ್ರೀ ಪ್ರಸನ್ನ.ಎಸ್ ಸಹಾಯಕ ಕಾರ್ಯಪಾಲಕ ಇಂಜಿನಿಯರಿಂಗ್ (ಸ್ವತಂತ್ರ ಪ್ರಭಾರ), ಲೋಕೋಪಯೋಗಿ ಇಲಾಖೆ, ಇವರನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡಿರುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಪ್ರಸನ್ನ.ಎಸ್ ಸಹಾಯಕ ಕಾರ್ಯಪಾಲಕ ಇಂಜಿನಿಯರಿಂಗ್ (ಸ್ವತಂತ್ರ ಪ್ರಭಾರ), ಲೋಕೋಪಯೋಗಿ ಇಲಾಖೆ, ಇವರ ವರ್ಗಾವಣೆ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಳ ನಿಯುಕ್ತಿಗೊಳಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 07**: ಶ್ರೀಮತಿ ಲಕ್ಷ್ಮಿ. ಕೆ, ದಿವಂಗತ ಶ್ರೀ ವೀರಭದ್ರಪ್ಪ, ಕಿರಿಯ ಸಹಾಯಕರು, ತೆಲುಗು ವಿಭಾಗ, ಇವರ ಪತ್ನಿ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ದಿವಂಗತ ಶ್ರೀ ವೀರಭದ್ರಪ್ಪ, ಕಿರಿಯ ಸಹಾಯಕರು, ತೆಲುಗು ವಿಭಾಗ, ಇವರ ಪತ್ನಿಯಾದ ಶ್ರೀಮತಿ ಲಕ್ಷ್ಮಿ. ಕೆ ಇವರನ್ನು ಅನುಕಂಪದ ಆಧಾರದ ಮೇಲೆ, ಕರ್ನಾಟಕ ನಾಗರೀಕಾ ಸೇವಾ (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, ನಿಯಮ 4(4)ರ ಅಡಿಯಲ್ಲಿ ಪ್ರಸ್ತುತ ಖಾಲಿ ಇರುವ ಗ್ರೂಪ್ "ಡಿ" ಹುದ್ದೆಗೆ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು.



18/11/23

**Proceedings of the 171st meeting of the Syndicate held on 10.11.2023**

**ವಿಷಯ ಸಂಖ್ಯೆ 08**: ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಮುಖ್ಯಸ್ಥರನ್ನು/ಸಂಯೋಜಕರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಈ ಕೆಳಕಂಡ ವಿಭಾಗಗಳಿಗೆ ಮುಖ್ಯಸ್ಥರನ್ನು/ಸಂಯೋಜಕರನ್ನು ಅವರುಗಳ ಮುಂದೆ ಸೂಚಿಸಿರುವ ದಿನಾಂಕಗಳಿಂದ ಎರಡು ವರ್ಷದ ಅವಧಿಗೆ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ಶಿಕ್ಷಕರು ಹೆಸರು ಮತ್ತು ವಿಭಾಗ | ದಿನಾಂಕ |
|---|---|---|
| 1. | ಡಾ. ಬಿ.ಪಿ. ಹರಿಣಿ, ಪ್ರಾಣಿಶಾಸ್ತ್ರ ವಿಭಾಗ | ದಿನಾಂಕ: 01-09-2023ರಿಂದ ಜಾರಿಗೆ ಬರುವಂತೆ ಪ್ರಾಣಿಶಾಸ್ತ್ರ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು. |
| 2. | ಡಾ. ಡಿ ಉಷಾ ಆನಂದಿ ಪ್ರಾಣಿಶಾಸ್ತ್ರ ವಿಭಾಗ | ವಿಶ್ವವಿದ್ಯಾಲಯವು ಹೊರಡಿಸುವ ಆದೇಶದಿಂದ ಜಾರಿಗೆ ಬರುವಂತೆ ತಳಿಶಾಸ್ತ್ರ ವಿಷಯದ ಸಂಯೋಜಕರನ್ನಾಗಿ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು. |

**Proceedings of the 171st meeting of the Syndicate held on 10.11.2023**

**ವಿಷಯ ಸಂಖ್ಯೆ 09**: ಬೆಂಗಳೂರು ವಿಶ್ವವಿದ್ಯಾಲಯದ ಗ್ರಾಮೀಣಾಭಿವೃದ್ಧಿ ವಿಭಾಗದ ವಿದ್ಯಾರ್ಥಿಗಳು ಅಧ್ಯಯನದ ಉದ್ದೇಶಕ್ಕಾಗಿ ಶೈಕ್ಷಣಿಕ ಶಿಬಿರದ ವೆಚ್ಚವಾದ ರೂ. 3,85,450/- ಗಳ ಮಂಜೂರಾತಿ ಆದೇಶವನ್ನು ಸಿಂಡಿಕೇಟ್ ಸಭೆ ಅನುಸಮರ್ಥನೆಗಾಗಿ ಮಂಡಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಗ್ರಾಮೀಣಾಭಿವೃದ್ಧಿ ವಿಭಾಗದ ವಿದ್ಯಾರ್ಥಿಗಳು ಅಧ್ಯಯನದ ಉದ್ದೇಶಕ್ಕಾಗಿ ಶೈಕ್ಷಣಿಕ ಶಿಬಿರದ ವೆಚ್ಚವಾದ ರೂ. 3,85,450/- ಗಳ ಮಂಜೂರಾತಿ ದಿನಾಂಕ: 05-10-2023ರ ಆದೇಶವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**Proceedings of the 171st meeting of the Syndicate held on 10.11.2023**

**ವಿಷಯ ಸಂಖ್ಯೆ 10:** ಪಿ.ಹೆಚ್.ಡಿ ಪ್ರವೇಶ ಪರೀಕ್ಷೆಯಲ್ಲಿ ನಕಲು ಮಾಡಿರುವ ವಿದ್ಯಾರ್ಥಿಗೆ ಸಂಬಂಧಿಸಿದಂತೆ ವಿಚಾರಣಾ ಸಮಿತಿ ನೀಡಿರುವ ವರದಿ ಬಗ್ಗೆ.

**ನಿರ್ಣಯ:**

ದಿನಾಂಕ: 16-07-2023ರಂದು ನಡೆದ ಬೆಂಗಳೂರು ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆಯಲ್ಲಿ ಕೆ.ಎಲ್.ಇ. ಪದವಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಶ್ರೀ ಮುನಿರಾಜು ಕೆ, ಸಂವಹನ ವಿಷಯದ ವಿದ್ಯಾರ್ಥಿ ಇವರು ಪರೀಕ್ಷೆಗೆ ಕಾನೂನು ಬಾಹಿಯರವಾಗಿ ಮೊಬೈಲ್ ದೂರವಾಣಿ ಉಪಯೋಗಿಸಿ ಪರೀಕ್ಷೆ



18/11/23

ಬರೆದಿರುವುದು ಸಾಬೀತಾಗಿದೆ ಎಂದು ಡೀನರು, ಕಲಾ ನಿಕಾಯ ಇವರ ಅಧ್ಯಕ್ಷತೆಯಲ್ಲಿನ ಸಮಿತಿಯು ವರದಿಯನ್ನು ಸಲ್ಲಿಸಿರುವ ಕಾರಣ, ಸದರಿ ವರದಿಯನ್ನು ಅನುಮೋದಿಸಿ ಮೇಲ್ಕಂಡ ವಿದ್ಯಾರ್ಥಿಗೆ ಸದರಿ ಪಿ.ಹೆಚ್.ಡಿ. ಪರೀಕ್ಷೆಯ ಪ್ರವೇಶ ಪರೀಕ್ಷೆಯಿಂದ ಅನರ್ಹಗೊಳಿಸಲು ಹಾಗೂ ಬೆಂಗಳೂರು ವಿಶ್ವವಿದ್ಯಾಲಯವು ನಡೆಸುವ ಮುಂದಿನ ಪಿ.ಹೆಚ್.ಡಿ. ಪರೀಕ್ಷೆಯನ್ನು ಒಂದು ಬಾರಿ ತೆಗೆದುಕೊಳ್ಳಬಾರದೆಂಬ ನಿರ್ಬಂಧ ವಿಧಿಸಲು ಸಿಂಡಿಕೇಟ್ ನಿರ್ಣಯಿಸಿತು.

ಈ ಹಂತದಲ್ಲಿ, ಪ್ರೊ. ಎಂ. ನಾರಾಯಣಸ್ವಾಮಿ ಅವರು ಮಾತನಾಡಿ ವಿಶ್ವವಿದ್ಯಾಲಯವು ಸಾಕಷ್ಟು ಮುಂಜಾಗ್ರತಾ ಕ್ರಮವನ್ನು ಕೈಗೊಂಡರೂ ಕೂಡ ಮೇಲ್ಕಂಡ ಪ್ರಕರಣವನ್ನು ಉದಾಹರಿಸಿ ಕೆಲವು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆ ಕುರಿತು ಪತ್ರಿಕೆಗಳಲ್ಲಿ ಸತ್ಯಕ್ಕೆ ದೂರವಾದ ವರದಿಯನ್ನು ಪ್ರಕಟಿಸಿ ವಿಶ್ವವಿದ್ಯಾಲಯಕ್ಕೆ ಮುಜುಗರ ತರುವಂತಹ ಕೆಲಸ ಮಾಡಿರುತ್ತಾರೆ. ಮುಂದೆ, ಇಂತಹ ಸನ್ನಿವೇಶಗಳು ಬರದಂತೆ ಇನ್ನೂ ಹೆಚ್ಚಿನ ಕ್ರಮವಹಿಸಬೇಕೆಂದು ಸಲಹೆ ನೀಡಿದರು.

*Proceedings of the 171st meeting of the Syndicate held on 10.11.2023*

**Item No. 11:** Approval of the Memorandum of Understanding between Bangalore University and Indian Institute of Public Administration (IIPA) Bangalore-reg.

***Resolution:***

The Syndicate resolved to approve the draft Memorandum of Understanding between Bangalore University and Indian Institute of Public Administration (IIPA), Bangalore to facilitate colloborative events in terms of Research and Development, exchange of human resources etc.,

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 12:** ಸೆಪ್ಟೆಂಬರ್/ಅಕ್ಟೋಬರ್ 2022 ರ ಪರಿಸರ ವಿಜ್ಞಾನ ವಿಷಯದ 2ನೇ ಸೆಮಿಸ್ಟರ್‌ನ ಸ್ನಾತಕ ಪರೀಕ್ಷೆಯ ಮೌಲ್ಯಮಾಪನಕ್ಕೆ ಹಾಜರಾದ ಅಧ್ಯಾಪಕರ ಸಂಭಾವನೆ ಮಂಜೂರು ಮಾಡುವ ಬಗ್ಗೆ.

ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ, ಸೆಪ್ಟಂಬರ್ / ಅಕ್ಟೋಬರ್ 2022ರ 2ನೇ ಸೆಮಿಸ್ಟರ್ ಸ್ನಾತಕ ಪರೀಕ್ಷೆಯ ಪರಿಸರ ವಿಜ್ಞಾನ ವಿಷಯದ ಉತ್ತರ ಪತ್ರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅಧ್ಯಯನ ಮಂಡಳಿ ಅನುಮೋದಿತ ಪರೀಕ್ಷಕರ ಪಟ್ಟಿಯಲ್ಲಿ ಏಳು ಜನ ಮೌಲ್ಯಮಾಪಕರು ಮಾತ್ರ ಇದ್ದುದರಿಂದ ಮೌಲ್ಯಮಾಪನ ಕಾರ್ಯ ಒತ್ತಡದಿಂದಾಗಿ ಹೆಚ್ಚುವರಿಯಾಗಿ ಎಳು ಜನ ಅಧ್ಯಾಪಕರನ್ನು ಮೌಲ್ಯಮಾಪನ ಕಾರ್ಯಕ್ಕೆ



18/11/23

ಪರಿಸರ ವಿಜ್ಞಾನ ಅಭಿರಕ್ಷರು ಉಪಯೋಗಿಸಿಕೊಂಡಿರುತ್ತಾರೆ. ಈ ಮೌಲ್ಯಮಾಪಕರಿಗೆ ಸಂಭಾವನೆಯನ್ನು ಮಂಜೂರು ಮಾಡುವ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಎನ್.ಇ.ಪಿ ಪಠ್ಯಕ್ರಮದಲ್ಲಿ ಮುಖ್ಯ ಆಯ್ಕೆಯ ವಿಷಯವಾದ ಪರಿಸರ ವಿಜ್ಞಾನ ವಿಷಯದ ಪತ್ರಿಕೆಯನ್ನು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ತೆಗೆದುಕೊಂಡಿರುವ ಕಾರಣ ಮೌಲ್ಯಮಾಪನ ಕಾರ್ಯಕ್ಕೆ ಈ ಹೆಚ್ಚುವರಿ ಶಿಕ್ಷಕರನ್ನು ಉಪಯೋಗಿಸಿಕೊಂಡಿರುವುದರಿಂದ ಅಧ್ಯಾಪಕರಿಗೆ ಪ್ರತಿ ಪತ್ರಿಕೆಗೆ ರೂ.13.00/–ರಂತೆ ಸಂಭಾವನೆ ಹಾಗೂ ಅವರು ಕಾರ್ಯ ನಿರ್ವಹಿಸಿದ ದಿನಗಳಿಗೆ ದಿನ ಭತ್ಯೆಗಳನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿ, ಮುಂದೆ ಪರೀಕ್ಷಕರ ಪಟ್ಟಿಗಳನ್ನು ಪರೀಕ್ಷಾ ಪೂರ್ವದಲ್ಲೇ ಅನುಮೋದನೆ ಪಡೆದುಕೊಂಡು ಮೌಲ್ಯಮಾಪನ ಕಾರ್ಯಕ್ಕೆ ಶಿಕ್ಷಕರ ಸೇವೆಯನ್ನು ಪಡೆದುಕೊಳ್ಳಲು ಸೂಚಿಸಿತು.



**Item No.13:** Procurement of Gold medals for the 58th Annual Convocation-reg.

***Resolution:***

After detailed discussion, the Syndicate ratified the action taken by the University in procuring 299 numbers of Gold Medals at the rate of Rs.6,600/- (inclusive of Tax) per unit for the 58th Annual Convocation of the Bangalore University.

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 14:** ಸ್ವಾಯತ್ತ ಕಾಲೇಜಾದ ಬೆಂಗಳೂರಿನ ಸುರಾನಾ ಕಾಲೇಜಿನ ಎಂ.ಬಿ.ಎ /ಎಂ.ಸಿ.ಎ. ಕೋರ್ಸುಗಳ ಹಾಗೂ ಐ.ಎಫ್.ಐ.ಎಂ ಕಾಲೇಜಿನ ಬಿ.ಸಿ.ಎ ಕೋರ್ಸಿನ ವಿದ್ಯಾರ್ಥಿ ಪ್ರಮಾಣದ ಹೆಚ್ಚಳದ ವಿಷಯದಲ್ಲಿ ರಚಿಸಲಾದ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2023–24ನೇ ಸಾಲಿನಲ್ಲಿ ಸ್ವಾಯತ್ತ ಕಾಲೇಜಾದ ಬೆಂಗಳೂರಿನ ಸುರಾನಾ ಕಾಲೇಜಿನ ಎಂ.ಬಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು 120 ರಿಂದ 240ಕ್ಕೆ ಹಾಗೂ ಎಂ.ಸಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು 60 ರಿಂದ 120ಕ್ಕೆ ಹೆಚ್ಚಿಸುವ ಬಗ್ಗೆ ಹಾಗೂ ಐ.ಎಫ್.ಐ.ಎಂ. ಕಾಲೇಜಿನ ಬಿ.ಸಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು 60 ರಿಂದ 120ಕ್ಕೆ ಹೆಚ್ಚಿಸುವ ವಿಷಯದಲ್ಲಿ, ಪ್ರೊ. ನಾರಾಯಣಸ್ವಾಮಿ ಎಂ ಇವರ ಅಧ್ಯಕ್ಷತೆಯಲ್ಲಿನ ಸಮಿತಿಯ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು.



18/11/23

*Proceedings of the 171st meeting of the Syndicate held on 10.11.2023*

**Item No.15:** To consider the report submitted by Local Inquiry Committee under the Chairpersonship of Prof.C.Tejaswini, Member of Syndicate, in the matter of fresh affiliation to Rathinam School of Business, in pursuance of interim order passed by the Hon'ble High Court of Karnataka date 26.07.2023 in W.P No. 14981/2023.

***Resolution:***

The Syndicate resolved to approve the recommendations of the Local Inquiry Committee submitted under the Chairpersonship of Prof.C.Tejaswini, Member of Syndicate, in the matter of fresh affiliation to Rathinam School of Business for the academic year 2023-24 u/s 59(9) of the K.S.U. Act, 2000.

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 16:** 2023–24ನೇ ಸಾಲಿಗೆ ಕಾಲೇಜುಗಳಿಗೆ ಸಂಯೋಜನಾ ನವೀಕರಣದ ನಿಮಿತ್ತ ನೇಮಕ ಮಾಡಲಾದ ಪ್ರೊ. ನಾರಾಯಣಸ್ವಾಮಿ ಎಂ, ಸಿಂಡಿಕೇಟ್ ಸದಸ್ಯರು, ಬೆಂ.ವಿ.ವಿ ಇವರ ಅಧ್ಯಕ್ಷತೆಯಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, 2023–24ನೇ ಸಾಲಿಗೆ ಕಾಲೇಜುಗಳಿಗೆ ಸಂಯೋಜನಾ ನವೀಕರಣದ ನಿಮಿತ್ತ ನೇಮಕ ಮಾಡಲಾದ ಪ್ರೊ. ನಾರಾಯಣಸ್ವಾಮಿ ಎಂ, ಸಿಂಡಿಕೇಟ್ ಸದಸ್ಯರು, ಬೆಂ.ವಿ.ವಿ ಇವರ ಅಧ್ಯಕ್ಷತೆಯಲ್ಲಿನ ಅ) ಶ್ರೀ ಎಸ್ ಕರಿಯಪ್ಪ ಕಾಲೇಜ್ ಆಫ್ ಎಜುಕೇಷನ್ ಮತ್ತು ಆ) ಶ್ರೀ ರಾಘವೇಂದ್ರ ಕಾಲೇಜ್ ಆಫ್ ಎಜುಕೇಷನ್‌ಗಳಿಗೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳನ್ನು ಸಿಂಡಿಕೇಟ್ ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 59(9)ರ ಅಡಿಯಲ್ಲಿ ಅನುಮೋದಿಸಿತು. ಮುಂದುವರೆದು, ಮುಂದಿನ ಶೈಕ್ಷಣಿಕ ಸಾಲಿನಿಂದ ಸಂಯೋಜನಾ ನವೀಕರಣಕ್ಕೆ ಸಂಯೋಜಿತ ಕಾಲೇಜುಗಳು ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬೇಕೆಂದು ಹಾಗೂ ನಿಗದಿತ ಅವಧಿಯ ನಂತರ ಮನವಿ ಸಲ್ಲಿಸಿದಲ್ಲಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಸೂಚಿಸಿ ಒಂದು ಸುತ್ತೋಲೆಯನ್ನು ಹೊರಡಿಸಲು ಸಿಂಡಿಕೇಟ್ ನಿರ್ದೇಶಿಸಿತು.

18/11/23

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 17:** 2023–24ನೇ ಸಾಲಿಗೆ ಕಾಲೇಜುಗಳಿಗೆ ಸಂಯೋಜನಾ ನವೀಕರಣದ ನಿಮಿತ್ತ ನೇಮಕ ಮಾಡಲಾದ ಡಾ. ಮಾಲಿನಿ.ಕೆ, ಸಿಂಡಿಕೇಟ್ ಸದಸ್ಯರು, ಬೆಂ.ವಿ.ವಿ ಇವರ ಅಧ್ಯಕ್ಷತೆಯಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2023–24ನೇ ಸಾಲಿಗೆ, ಡಾ. ಮಾಲಿನಿ. ಕೆ., ಸಿಂಡಿಕೇಟ್ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯವರು ಕೆಳಕಂಡ ಕಾಲೇಜುಗಳನ್ನು ಪರಿವೀಕ್ಷಣೆಯನ್ನು ನಡೆಸಿ ಸಲ್ಲಿಸಿದ ಶಿಫಾರಸ್ಸು ವರದಿಗಳನ್ನು ಕೆ.ಎಸ್.ಯು. ಅಧಿನಿಯಮ2000ದ ಪ್ರಕರಣ 59(9)ರಡಿಯಲ್ಲಿ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

| ಕ್ರ.ಸಂ. | ಕಾಲೇಜು | ಅಸ್ತಿತ್ವದಲ್ಲಿರುವ ಕೋರ್ಸುಗಳು | ಅಂಕಗಳು ಶಿಫಾರಸ್ಸು (ಕನಿಷ್ಠ ಅಂಕ ಶೇ;45) |
|---|---|---|---|
| 1. | ನಿಸರ್ಗ ಪದವಿ ಸಂಜೆ ಕಾಲೇಜು, ಹೆಗ್ಗನಹಳ್ಳಿ, ಬೆಂಗಳೂರು–560 091 | ಬಿ.ಕಾಂ. | 63.32 ಶಿಫಾರಸ್ಸು ಮಾಡಲಾಗಿದೆ |
| 2. | ದಿ ನ್ಯಾಷನಲ್ ಕಾಲೇಜು, 7ನೇ ಬ್ಲಾಕ್, ಜಯನಗರ, ಬೆಂಗಳೂರು | ಬಿ.ಎ., ಬಿ.ಎಸ್ಸಿ, ಬಿಸಿಎ, ಬಿ.ಕಾಂ., ಎಂ.ಕಾಂ. ಎಂ.ಎಸ್ಸಿ. | 81.27 ಶಿಫಾರಸ್ಸು ಮಾಡಲಾಗಿದೆ |
| 3. | ಕಾಲೇಜ್ ಆಫ್ ಫೈನ್ ಆರ್ಟ್ಸ್, ಕರ್ನಾಟಕ ಚಿತ್ರಕಲಾ ಪರಿಷತ್ತು, ಶ್ರೀನಿವಾಸಪುರ, ಬೆಂಗಳೂರು | ಬಿ.ವಿ.ಎ., ಎಂ.ವಿ.ಎ. | 73.02 ಶಿಫಾರಸ್ಸು ಮಾಡಲಾಗಿದೆ |

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 18:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವಾಹನಗಳ ಕೊರತೆ ಇರುವ ಕಾರಣ ದೈನಂದಿನ ಕಛೇರಿ ಕೆಲಸಕಾರ್ಯಗಳಿಗೆ ಬಹಳ ತೊಂದರೆಯಾಗುತ್ತಿರುವ ಹಿನ್ನಲೆಯಲ್ಲಿ ನೂತನ ವಾಹನ ಖರೀದಿಸುವ ಕುರಿತು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಅಭಿಯಂತರ ವಾಹನವನ್ನು ಹೊರತುಪಡಿಸಿ, ನಾಲ್ಕು ವಾಹನಗಳು ಚಾಲ್ತಿಯಲ್ಲಿರುತ್ತವೆ. ಈ ನಾಲ್ಕು ವಾಹನಗಳಲ್ಲಿ ಎರಡು ವಾಹನಗಳು ಸಧ್ಯದಲ್ಲೇ 15 ವರ್ಷ ಪೂರೈಸುತ್ತಿವೆ ಹಾಗೂ ಅವುಗಳು ಸುಸ್ಥಿತಿಯಲ್ಲಿರದ ಕಾರಣ ಪದೇ ಪದೇ ರಿಪೇರಿಗೆ ಹೆಚ್ಚಿನ ಮೊತ್ತ ವ್ಯಯ ಮಾಡಬೇಕಾಗಿದೆ. ಈಗಾಗಲೇ ಕುಲಸಚಿವರು (ಮೌಲ್ಯಮಾಪನ) ಅವರ ವಾಹನವು (Toyota Corolla) 15



18/11/23

ವರ್ಷ ಪೂರೈಸಿರುವುದರಿಂದ ಸರ್ಕಾರದ ಆದೇಶಾನುಸಾರ ಸದರಿ ವಾಹನವನ್ನು ಉಪಯೋಗಿಸುವಂತಿರುವುದಿಲ್ಲ. ಆದಕಾರಣ ಕುಲಸಚಿವರು (ಮೌಲ್ಯಮಾಪನ) ಹಾಗೂ ವಿತ್ತಾಧಿಕಾರಿಗಳಿಗೆ ಹೊಸ ವಾಹನ ನೀಡುವ ಅವಶ್ಯಕತೆ ಇರುತ್ತದೆ. ಮುಂದುವರೆದು, ಹಿಂದೆ ಸಂಪತ್ತಿ ವಿಭಾಗಕ್ಕೆ ಒಂದು ಮಾರುತಿ ಈಕೋ ವಾಹನವನ್ನು ಖರೀದಿಸಲು 160ನೇ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಲಾಗಿದೆ. ಆದರೆ, ಇನ್ನೂ ಖರೀದಿ ಮಾಡಿರುವುದಿಲ್ಲ. ಆದ್ದರಿಂದ ಇಬ್ಬರು ಶಾಸನಬದ್ಧ ಅಧಿಕಾರಿಗಳಿಗೆ ಹಾಗೂ ಸಂಪತ್ತಿ ವಿಭಾಗಕ್ಕೆ ವಾಹನ ಖರೀದಿ ಸಂಬಂಧ ಜೆಮ್ ಪೋರ್ಟಲ್‌ನಲ್ಲಿ ನಮೂದಿಸಿರುವ ದರಪಟ್ಟಿಯಂತೆ ವಾಹನ ಕಂಪನಿ ಮತ್ತು ಮಾದರಿಗಳ ದರ ವಿವರಗಳನ್ನು ಕಾರ್ಯಸೂಚಿಯಲ್ಲಿ ನೀಡಲಾಗಿದೆ ಎಂದು ತಿಳಿಸಿ, ವಾಹನ ಖರೀದಿಗೆ ಸಿಂಡಿಕೇಟ್ ಅನುಮೋದನೆ ಬೇಕೆಂದು ತಿಳಿಸಿದರು. ಅವರು ಮುಂದುವರೆದು, ವಿಶ್ವವಿದ್ಯಾಲಯ ನಡೆಸುವ ವಿಚಾರಣ ಸಂಕಿರಣಗಳು, ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಅತಿ ಮುಖ್ಯ ಗಣ್ಯರನ್ನು ಕರೆತರುವ ಕಾರ್ಯಕ್ಕೆ ಬಾಡಿಗೆ ವಾಹನವನ್ನು ಪಡೆದು ಹೆಚ್ಚಿನ ಮೊತ್ತ ವ್ಯಯ ಮಾಡಲಾಗುತ್ತಿದೆ ಎಂದು ಸಿಂಡಿಕೇಟ್ ಗಮನಕ್ಕೆ ತಂದರು.

ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಉನ್ನತ ಮಟ್ಟದ ವಿಜ್ಞಾನಿಗಳು, ನಿವೃತ್ತ ಕುಲಪತಿಗಳು ಇವರನ್ನು ಕರೆತರಲು ಬಾಡಿಗೆ ವಾಹನವನ್ನು ಕಳುಹಿಸಿ ಮುಜುಗರಕ್ಕೆ ಒಳಪಡುವ ಪ್ರಸಂಗಗಳು ಆಗಿವೆ ಎಂದರು.

ಪ್ರೊ. ನಾರಾಯಣಸ್ವಾಮಿ ಎಂ, ಅವರು ಮಾತನಾಡಿ, ವಿಶ್ವವಿದ್ಯಾಲಯವು ನ್ಯಾಕ್ 'ಎ++' ದರ್ಜೆಯನ್ನು ಪಡೆದಿದ್ದು ವಿಶ್ವವಿದ್ಯಾಲಯದ ಘನತೆಯನ್ನು ಕಾಯ್ದುಕೊಳ್ಳಲು ಹೊಸ ವಾಹನಗಳ ಖರೀದಿಯು ಅತ್ಯಾವಶ್ಯಕವಾಗಿದೆ ಎಂದು ತಿಳಿಸಿ, ಪ್ರಸಾರಾಂಗದಿಂದ ಪ್ರಕಟಗೊಳ್ಳುವ ಪುಸ್ತಕಗಳನ್ನು ಕಾಲೇಜುಗಳು ಹಾಗೂ ಪುಸ್ತಕ ಪ್ರದರ್ಶನ ಮೇಳೆಗಳಿಗೆ ಸರಬರಾಜು ಮಾಡಲು ವಾಹನದ ಅವಶ್ಯಕತೆ ಇದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸಂಪತ್ತಿ ವಿಭಾಗಕ್ಕೆ ಖರೀದಿಸುವ ವಾಹನವನ್ನೇ ಉಪಯೋಗಿಸಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ನಿರ್ದೇಶಕರು ವೈದ್ಯಕೀಯ ಶಿಕ್ಷಣ ಅವರು ಮಾತನಾಡಿ, ವಾಹನಗಳ ಮೇಲ್ವಿಚಾರಣೆಯು ವ್ಯವಸ್ಥಿತವಾಗಿರಬೇಕೆಂದು ತಿಳಿಸಿ, ವಿಶ್ವವಿದ್ಯಾಲಯದ ಘನತೆ ಕಾಯ್ದುಕೊಳ್ಳಲು ಹೊಸ ವಾಹನ ಖರೀದಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಡಾ. ಕಾವ್ಯಶ್ರೀ ಅವರು ಮಾತನಾಡಿ, ವಿಶ್ವವಿದ್ಯಾಲಯದ ಜ್ಞಾನಭಾರತಿ ಒಳಾಂಗಣದಲ್ಲಿ ಸಂಚರಿಸಲು ಷಟಲ್ ಸರ್ವೀಸ್ ಅನ್ನು ಪ್ರಾರಂಭಿಸಬೇಕೆಂದು ತಿಳಿಸಿದರು.

ಸದರಿ ಕಾರ್ಯಕ್ಕೆ ಒಂದು ಬ್ಯಾಟರಿ ಚಾಲಿತ ವಾಹನವನ್ನು ಪ್ರಾಯೋಜಿಸಲು ಖಾಸಗಿ ಕಂಪನಿಗಳನ್ನು ಕೋರಲಾಗುವುದು ಎಂದು ಕುಲಪತಿಗಳು ತಿಳಿಸಿದರು.

18/11/23

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಕುಲಸಚಿವರು (ಮೌಲ್ಯಮಾಪನ) ಮತ್ತು ವಿತ್ತಾಧಿಕಾಗಳ ಉಪಯೋಗಕ್ಕೆ ಎರಡು ನೂತನ ವಾಹನಗಳನ್ನು ಹಾಗೂ ಹಿಂದಿನ ಸಿಂಡಿಕೇಟ್ ನಿರ್ಣಯದಂತೆ ಒಂದು Maruthi Suzuki EECO 7ST ವಾಹನಗಳನ್ನು ಖರೀದಿಸಲು ಸಿಂಡಿಕೇಟ್ ಅನುಮೋದಿಸಿ, ಖರೀದಿ ಮಾಡುವ ವಾಹನಗಳಿಗೆ G ನೋಂದಣಿ ಸಂಖ್ಯೆಯು ದೊರೆಯುವುದರ ಸಾಧ್ಯತೆಯನ್ನು ಪರಿಶೀಲಿಸಿದ ನಂತರ ಸೂಕ್ತ ವಾಹನದ ಮಾದರಿಯನ್ನು ನಿರ್ಧರಿಸಿ ವಾಹನಗಳನ್ನು ಖರೀದಿಸಲು ಕುಲಪತಿಗಳಿಗೆ ಸಿಂಡಿಕೇಟ್ ಅಧೀಕರಿಸಿತು.

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 19:** ಬೆಂಗಳೂರು ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಿಗೆ ಮೊಬೈಲ್ ಫೋನಿನ ಖರೀದಿ ಬಗ್ಗೆ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳನ್ನು ಸವಕಳಿ ವೆಚ್ಚವನ್ನು ಭರಿಸಿ ವೈಯಕ್ತಿಕವಾಗಿ ಉಪಯೋಗಿಸಿಕೊಳ್ಳುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಿಗೆ ಮೊಬೈಲ್ ದೂರವಾಣಿ ಖರೀದಿ ವೆಚ್ಚ ರೂ.25,000/-ಗಳಿಗೆ ಮೀರದಂತೆ ಮರುಪಾವತಿಗೆ ಹಾಗೂ ಕಂಪ್ಯೂಟರ್, ಪ್ರಿಂಟರ್, ಸ್ಕ್ಯಾನರ್, ಸಿಡಿ ರೈಟರ್, ಮೊಬೈಲ್/ಸ್ಮಾರ್ಟ್ ಫೋನ್ ಮತ್ತು ಲ್ಯಾಪ್‌ಟಾಪ್‌ಗಳ ಬೆಲೆಯ ಸವಕಳಿ ವೆಚ್ಚವನ್ನು ಕೆಳಕಂಡಂತೆ ವಿಶ್ವವಿದ್ಯಾಲಯಕ್ಕೆ ಪಾವತಿಸಿ ನಿವೃತ್ತ ಅಧಿಕಾರಿಗಳೇ ಉಯಯೋಗಿಸಿಕೊಳ್ಳುವ ಸಂಬಂಧ ಸರ್ಕಾರದ ಆದೇಶ 1) ಸಂಖ್ಯೆ: ಸಿಆಸುಇ 131 ಡಿವಿ 2016 ದಿನಾಂಕ: 21-03-2019 ಮತ್ತು 2) ಸಿಆಸುಇ 201 ಡಿಟಿಎನ್ 2015 ದಿನಾಂಕ: 20-11-2015ಗಳನ್ನು ಅಳವಡಿಸಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು.

ಅ) ಪ್ರತಿ ವರ್ಷಕ್ಕೆ ಶೇಕಡಾ 40ರಂತೆ ಸವಕಳಿ ಮಾಡಿ ಉಳಿದ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಮರುಪಾವತಿ ಮಾಡಿ ಅಥವಾ

ಆ) ಮೂರು ವರ್ಷಗಳಿಗೂ ಮೇಲ್ಪಟ್ಟು ಉಪಯೋಗಿಸಿಕೊಂಡಿದ್ದಲ್ಲಿ, ವಿಶ್ವವಿದ್ಯಾಲಯವು ನೀಡಿದ ಹಣದ ಶೇಕಡಾ 10ರಷ್ಟು ಕನಿಷ್ಠ ಬೆಲೆಯನ್ನು ವಿಶ್ವವಿದ್ಯಾಲಯಕ್ಕೆ ಮರುಪಾವತಿ ಮಾಡಿ ಉಪಯೋಗಿಸಬಹುದಾಗಿದೆ.

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 20:** ಶ್ರೀ ಧನರಾಜ್ ಹೆಚ್, ಗ್ರೂಪ್ 'ಡಿ' ಇವರ ಅನಧಿಕೃತ ಗೈರು ಹಾಜರಿಗೆ ಸಂಬಂಧಿಸಿದಂತೆ ದುರ್ನಡತೆ ಆರೋಪ ಪಟ್ಟಿ ನೀಡಲು ಅನುಮತಿ ಕೋರಿ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಧನರಾಜ್ ಹೆಚ್, ಗ್ರೂಪ್ 'ಡಿ' ಇವರು, ದಿನಾಂಕ: 11-10-2022 ರಿಂದ 31-10-2022 ಹಾಗೂ ದಿನಾಂಕ: 05-11-2022 ರಿಂದ ದಿನಾಂಕ; 25-10-2023ರ ವರೆಗೆ ಸುಮಾರು ಒಟ್ಟು 376 ದಿನಗಳು ಅನಧಿಕೃತ ಗೈರು ಹಾಜರಾಗಿರುವ ಸಂಬಂಧ ಪರಾಮರ್ಶಿತ ಟಿಪ್ಪಣಿಯಲ್ಲಿ ಲಗತ್ತಿಸಿರುವಂತೆ ದುರ್ನಡತೆ ಆರೋಪ ಪಟ್ಟಿಯನ್ನು (Article of Charges) ಅನ್ನು ಪರಿನಿಯಮಾವಳಿಯಂತೆ ಸಿಂಡಿಕೇಟ್ ಅನುಮೋದಿಸಿತು.



18/11/23

*Proceedings of the 171st meeting of the Syndicate held on 10.11.2023*

**Item No. 21:** Proceedings of the 09th &10th meeting of the committee for acceptance and approval of the lowest tenders notified by the Engineering Division, Bangalore University, Bengaluru.

***Resolution:***

The Syndicate resolved to approve the proceedings of the 09th &10th meeting of the committee for acceptance and approval of the lowest tenders notified by the Engineering Division, Bangalore University, Bengaluru

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 22:** ಬೆಂಗಳೂರು ವಿಶ್ವವಿದ್ಯಾಲಯದಿಂದ ಬೆಂಗಳೂರು ನಗರ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಅಭಿಮತದ ಮೇರೆಗೆ ವರ್ಗಾವಣೆಗೊಂಡು ಕಾರ್ಯ ನಿರ್ವಹಿಸುತ್ತಿರುವ/ವಯೋನಿವೃತ್ತಿ ಹೊಂದಿರುವ ಬೋಧಕೇತರ ನೌಕರರಿಗೆ ಸರ್ಕಾರದ ಆದೇಶದಂತೆ ನಿವೃತ್ತಿ ವೇತನ ಸೌಲಭ್ಯಗಳು ಹಾಗೂ ಪಿಂಚಣಿ ವಂತಿಗೆ ಮತ್ತು ರಜೆ ವಂತಿಗೆ ಹಣ ವರ್ಗಾಯಿಸಲು ಹೊರಡಿಸಲಾಗಿದ್ದ ಆದೇಶವನ್ನು ಅನುಸಮರ್ಥಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದಿಂದ ಬೆಂಗಳೂರು ನಗರ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಅಭಿಮತದ ಮೇರೆಗೆ ವರ್ಗಾವಣೆಗೊಂಡು ಕಾರ್ಯ ನಿರ್ವಹಿಸುತ್ತಿರುವ/ವಯೋನಿವೃತ್ತಿ ಹೊಂದಿರುವ ಬೋಧಕೇತರ ನೌಕರರಿಗೆ ಸರ್ಕಾರದ ಆದೇಶದಂತೆ ನಿವೃತ್ತಿ ವೇತನ ಸೌಲಭ್ಯಗಳು ಹಾಗೂ ಪಿಂಚಣಿ ವಂತಿಗೆ ಮತ್ತು ರಜೆ ವಂತಿಗೆ ಹಣ ವರ್ಗಾಯಿಸಲು ಹೊರಡಿಸಲಾಗಿದ್ದ ಆದೇಶವನ್ನು ಸಿಂಡಿಕೇಟ್ ಅನುಸಮರ್ಥಿಸಿ, ಉಳಿದ ಶಿಕ್ಷಕೇತರರು ಹಾಗೂ ಶಿಕ್ಷಕರ ನಿವೃತ್ತಿ ವೇತನ ಸೌಲಭ್ಯಗಳನ್ನು ಮೇಲ್ಕಂಡ ವಿಶ್ವವಿದ್ಯಾಲಯಗಳಿಗೆ ಸರ್ಕಾರದ ಆದೇಶಾನುಸಾರ ವರ್ಗಾಯಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿತು.

*Proceedings of the 171st meeting of the Syndicate held on 10.11.2023*

**ವಿಷಯ ಸಂಖ್ಯೆ 23:** ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕಾನೂನು ಸಲಹೆಗಾರರನ್ನು ನೇಮಿಸಿಕೊಂಡಿರುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:EST-I/E1/APT/LA/2022 ದಿನಾಂಕ: 26–09–2022ರ ಮೂಲಕ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕಾನೂನು ಸಲಹೆಗಾರನ್ನಾಗಿ ಶ್ರೀಮತಿ ಕೆ.ಜಿ. ಚಿಂತ, ನಿವೃತ್ತ ಜಿಲ್ಲಾ ನ್ಯಾಯಾದೀಶರು ಇವರನ್ನು ಕ್ರೋಢೀಕೃತ ವೇತನದ ಆಧಾರದ ಮೇಲೆ ಎರಡು ವರ್ಷದ ಅವಧಿಗೆ ನೇಮಿಸಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

18/11/23

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 24:** 2023–24 ನೇ ಸಾಲಿಗೆ ಕೆಲವು ಕಾಲೇಜುಗಳಿಗೆ ಹೊಸದಾಗಿ ಸ್ವಾಯತ್ತತೆಯನ್ನು ಮಂಜೂರು ಮಾಡುವ ಸಲುವಾಗಿ ಸ್ಥಾಯಿ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಕೆಳಕಂಡ ಕಾಲೇಜುಗಳಿಗೆ ಹೊಸದಾಗಿ ಸ್ವಾಯತ್ತತೆಯನ್ನು ಮಂಜೂರು ಮಾಡುವ ಸಲುವಾಗಿ, ಕಾಲೇಜಿನಲ್ಲಿ ಪ್ರವೇಶ ಮತ್ತು ನೇಮಕಾತಿಯಲ್ಲಿ ಸರ್ಕಾರದ ನಿಯಮಾನುಸಾರ ಮೀಸಲಾತಿಯನ್ನು ಅನುಸರಿಸಿರುವ ಬಗ್ಗೆ ಕಾಲೇಜುಗಳು ಸಲ್ಲಿಸಿರುವ ಮಾಹಿತಿಯನ್ನು ಪರಿಗಣಿಸಿ, ಸ್ಥಾಯಿ ಸಮಿತಿಯ ವರದಿಯನ್ನು ಪರಿನಿಯಮಾವಳಿಯ ಪ್ರಕರಣ 4.5ರ ಅಡಿಯಲ್ಲಿ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿ ವಿದ್ಯಾವಿಷಯಕ ಪರಿಷತ್ತಿಗೆ ರವಾನಿಸಿತು.

1. ಟಿ. ಜಾನ್ ಕಾಲೇಜು, ಕಮ್ಮನಹಳ್ಳಿ, ಗೊಟ್ಟಿಗೆರೆ ಅಂಚೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 083.
2. ಆಚಾರ್ಯಾ ಬೆಂಗಳೂರು ಬಿ ಸ್ಕೂಲ್, ಲಿಂಗಧೀರನಹಳ್ಳೀ, ಮಾಗಡಿ ಮುಖ್ಯರಸ್ತೆ, ಬೆಂಗಳೂರು–560 091.
3. ಆರ್.ಎನ್.ಎಸ್. ಪ್ರಥಮ ದರ್ಜೆ ಕಾಲೇಜು, ಡಾ. ವಿಷ್ಣುವರ್ಧನ ರಸ್ತೆ, ಚನ್ನಸಂದ್ರ, ರಾಜರಾಜೇಶ್ವರಿನಗರ, ಬೆಂಗಳೂರು–560 098.

ಮುಂದುವರೆದು, ಆಚಾರ್ಯಾ ಬೆಂಗಳೂರು ಬಿ ಸ್ಕೂಲ್ ಇದರ ಬಿ.ಸಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು 120 ರಿಂದ 180ಕ್ಕೆ ಹೆಚ್ಚಿಸಲು ಸಹ ಸಿಂಡಿಕೇಟ್ ಅನುಮೋದಿಸಿತು.

ಮುಂದುವರೆದು, ವರದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯ ನಂತರ ಸರ್ಕಾರಕ್ಕೆ ಕಳುಹಿಸಲು ಸಹ ನಿರ್ದೇಶಿಸಿತು.

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 25:** ಶ್ರೀ ಶ್ರೀನಿವಾಸ ರಾವ್, ಹಣಕಾಸು ವಿಭಾಗ, ದಿನಗೂಲಿ ನೌಕರರು ಇವರನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಗೂಲಿ ನೌಕರರಾದ ಶ್ರೀ ಶ್ರೀನಿವಾಸ ರಾವ್, ಹಣಕಾಸು ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಇವರನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲು ಅನುಮೋದಿಸಿ, ಅವರ ವರ್ಗಾವಣೆಯ ನಂತರ ವಾಪಸ್ಸು ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ತೆಗೆದುಕೊಳ್ಳುವುದಿಲ್ಲವೆಂದು ಹಾಗೂ ಅವರಿಗೆ ಯಾವುದೇ ನಿವೃತ್ತಿ ಸೌಲಭ್ಯಗಳು ಇರುವುದಿಲ್ಲವೆಂದು ಷರತ್ತುಗಳನ್ನು ವಿಧಿಸಲು ಸಿಂಡಿಕೇಟ್ ನಿರ್ಣಯಿಸಿತು.



18/11/23

***Proceedings of the 171st meeting of the Syndicate held on 10.11.2023***

**Item No.26:** Amendments to the Statutes in respect of Sri. Alampalli Venkataram Chair on Labour Research-reg.

***Resolution:***

The Syndicate resolved to approve the ammendments to the Statutes in respect of Sri. Alampalli Venkataram Chair on Labour Research.

***Proceedings of the 171st meeting of the Syndicate held on 10.11.2023***

**ವಿಷಯ ಸಂಖ್ಯೆ 27:** ದಿನಾಂಕ 03.11.2023 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಕುರಿತು.

ಕುಲಸಚಿವರು ಮಾತನಾಡಿ, ದಿನಾಂಕ: 03-11-2023ರಂದು ನಡೆದ ಕೇಂದ್ರ ಖರೀದಿ ಸಮಿತಿಯ ನಿರ್ಣಯಗಳನ್ನು ವಿವರವಾಗಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿ, ಸಿಂಡಿಕೇಟ್ ಅನುಮೋದನೆಯನ್ನು ಕೋರಿದರು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 03.11.2023 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

***Proceedings of the 171st meeting of the Syndicate held on 10.11.2023***

**Item No 28:** Printing of Practical, Project and Viva-voce OMR's in Bangalore University Printing press-reg.

The Registrar (Evaluation), informed the Syndicate that few students of 2006 to 2017 batches are requesting for inclusion of their practical / project viva-voce marks in the examination database. They have also represented the State Government as well as the Hon'ble Chancellor's Office. The Special Secretary to Governor has forwarded the applications of such students with a direction to take appropriate action as per rules. Earlier, the work of capturing practical / project viva-voce marks through OMR sheet was entrusted M/S TRS Forms and Services Pvt. Ltd. From the academic year 2019 and onwards the practical / project /viva-voce marks are being submitted to the Examination Branch in the form of CDs by the colleges. Therefore, at present the University is not using OMR sheets. Since the students were belongs to 2006 to 2017



18/11/23

batches, their practical / project /viva-voce marks have to be obtained through OMR for scanning. In view of this the approval of the Syndicate is sought for printing of 50 Nos. of OMR sheets each for the said purpose.

***Resolution:***

The Syndicate resolved to approve the proposal of printing of 50 Nos. of OMR sheets each from the Bangalore University Printing Press for capturing practical, project and viva-voce marks.



**Item No 29:** To consider Institution of Gold Medal award in the name of Sri.R.V Raveendran, Former Judge, Supreme Court of India.

***Resolution:***

The Syndicate resolved to approve for the institution of a Gold Medal in the name of Sri.R.V Raveendran, Former Judge, Supreme Court of India to award Gold Medal to the student who has secured highest marks in the subject Law of Contract (Commercial Laws), Five years B.A. LL.B. (Honors) course, every year at the annual convocation out of the interest accrued from the endowment of Rs.5.00 lakhs and to send a letter of appreciation to the donor in this regard.

Further, Syndicate resolved to authorize the Vice-Chancellor to constitute a Committee to make appropriate recommendations after studying the feasibility of awarding Gold Medals instituted long back with meagre amount.

*Proceedings of the 171st meeting of the Syndicate held on 10.11.2023*

**Item No 30:** To Consider Institution of Cash Prize award in the name of Dr. Achla Umapathi, Former Chairperson & Professor, Dept of Psychology, Bangalore University.

***Resolution:***

The Syndicate resolved to approve for the institution of Cash Prize in the name of Dr. Achla Umapathi, Former Chairperson & Professor, Dept of Psychology, Bangalore University in order to award the cas prize to the student who has secured



18/11/23

